

ಇವನನ್ನು ಮದುವೆಯಾಗಬೇಕಿದ್ದವಳು ಪದ್ಮ. ಆದರೆ, ಹೋರಾಟದಿಂದ ಜೈಲು ಸೇರಿದ ಪ್ರಭಾಕರ, ಪದ್ಮಳ ತಂದೆ ತಾಯಿಗೆ ಇಷ್ಟವಾಗದ ವ್ಯಕ್ತಿ. ಹಾಗಾಗಿಯೇ ಪದ್ಮಳನ್ನು ಶಂಕರನಿಗೆ ಕೊಟ್ಟು ಮದುವೆ ಮಾಡಿದ್ದಾರೆ. ಆದರೆ ಪದ್ಮ ಅಂತರಂಗದಲ್ಲಿ ಪ್ರಭಾಕರನನ್ನು ಮರೆಯುವುದಿಲ್ಲ. ಈ ದ್ವಂದ್ವದಲ್ಲಿ ಸಾಗುವ ಕಥೆ, ಪದ್ಮಳ ಮುಕ್ತತೆಯನ್ನು ಇಲ್ಲೂ ಗಂಡುಲೋಕ ಕಸಿದಿದೆ. ವಿಚಿತ್ರವೆಂದರೆ ಇಲ್ಲೂ ಪ್ರಭಾಕರ ಹೋರಾಟಗಾರ, ಪದ್ಮಳ ಅಣ್ಣನೂ ವಿದ್ಯಾವಂತ. ಆದರೆ ಇವರ ಯಾವ ವಿಚಾರಗಳು ಪದ್ಮಳ ಮನಸ್ಸನ್ನು ಬಯಲಿಗೆ ಬಿಟ್ಟಿಲ್ಲ. ಕಥೆಯ ಈ ಸಾಲು ಮಾರ್ಮಿಕವಾಗಿದೆ: ‘ಸಿಗರೇಟಿನ ವಾಸನೆ ಜಾಜಿ ಹೂವಿನ ಸುವಾಸನೆಯನ್ನು ಹಿಮ್ಮೆಟ್ಟಿಸಿತು’. ಈ ಸಿಗರೇಟು ಗಂಡನದು. ಸಿಗರೇಟು ಕಥೆಯಲ್ಲಿ ಸಂಕೇತವಾಗಿಯೇ ಕಾಣುತ್ತದೆ. ಹಾಗೆ ನೋಡಿದರೆ, ವೈದಿಕ ಹೆಣ್ಣುಮಕ್ಕಳ ಒಳವೇದನೆಗಳನ್ನು ಇವರಷ್ಟು ಕೂಡ ಮಾಸ್ತಿಯವರು ಅನಾವರಣ ಮಾಡಲು ಯತ್ನಿಸಲಿಲ್ಲ.

ಇವರ ನಂತರ ಗಮನಿಸಬೇಕಾದ ಕಥೆಗಾರ್ತಿ ವೀಣಾಶಾಂತೇಶ್ವರ. ಹೆಣ್ಣುಲೋಕವನ್ನು ಹೆಚ್ಚು ಮುಕ್ತವಾಗಿ ಕಾಣಿಸಿದ ಇವರ ಕಥನಗಳು ಹೆಚ್ಚು ಚರ್ಚೆಗೆ ಒಳಗಾಗಿವೆ. ವೀಣಾ ಅವರ ‘ತಿರುಗಿ ಹೋದಳು’ ಕಥೆ ಮಾರ್ಮಿಕವಾಗಿದೆ. ಏಕಕಾಲಕ್ಕೆ ಮುಸ್ಲಿಂ ಕುಟುಂಬದ ಹೆಣ್ಣಿನ ಸಂಕಟಗಳನ್ನು ಹೇಳುತ್ತಲೇ ಈ ಸಂಕಟಗಳನ್ನು ವೈಚಾರಿಕವಾಗಿ ವಿರೋಧಿಸುತ್ತಿದ್ದ ಹೊಸ ತಲೆಮಾರಿನ ಲಕ್ಷ್ಮೀ ಅವೇ ಇಕ್ಕಟ್ಟುಗಳಿಗೆ ಹೇಗೆ ಒಳಗಾಗುತ್ತಾಳೆ ಎಂಬುದು ಕಥೆ ಹೇಳುತ್ತದೆ. ಇಲ್ಲಿಯೂ ಕೂಡ ರಾಜಲಕ್ಷ್ಮೀಯವರ ಕಥೆಗಳ ಹಾಗೆಯೇ ಎಲ್ಲ ಗಂಡುಗಳು ವಿದ್ಯಾವಂತರೇ ಆಗಿದ್ದಾರೆ. ಕ್ರಮೇಣ ಅವರ ಅಂತರಂಗದ ‘ಬೇರೆತನದ ವಕ್ರತೆ’ಗಳು ತಿಳಿಯುತ್ತವೆ. ಇವರ ಇನ್ನೊಂದು ಕಥೆ ‘ಬಿಡುಗಡೆ’ಯಲ್ಲಿ ಸರೂಗೆ ಬಿಡುಗಡೆ ಸಿಗುವುದು ಗಂಡ ಸತ್ತಾಗಲೇ. ಇವರಲ್ಲಿ ಪ್ರೀತಿಯ ನಿಜಸ್ವರೂಪ, ಮಾನಸಿಕ ಒದ್ದಾಟಗಳು, ಕುಟುಂಬ ವ್ಯವಸ್ಥೆ, ಇತ್ಯಾದಿ ಅಂಶಗಳೇ ತಾತ್ವಿಕತೆಗಳಾಗಿ ನುಗ್ಗುತ್ತವೆ. ಆದರೆ, ಇವರು ಬದುಕನ್ನು ಕಟ್ಟಿಕೊಡುವಲ್ಲಿ ನಿರಾಶವಾದಿಗಳಲ್ಲ. ಇವರ ಕಥೆಗಳ ಹೆಣ್ಣಿಗೆ ತಾಳ್ಮೆ, ಸಾತ್ವಿಕತೆ ಇದ್ದೇ ಇದೆ. ಕೆಲವರಲ್ಲಿ ಪ್ರತಿರೋಧದ ಗಟ್ಟಿ ಗುಣಗಳಿವೆ; ಪ್ರೇಮವನ್ನು ಗುಂಡುಕುಲಕ್ಕೆ ಅರ್ಥಮಾಡಿಸುವ ಬಗೆಯೂ ಇದೆ. ಆದರೆ, ಲಂಕೇಶರ ಅನೇಕ ಹೆಣ್ಣುಜೀವಗಳು ತಮ್ಮ ಮನಸ್ಸಿಗೆ ತೋಚುವ ತೀರ್ಮಾನಗಳನ್ನು ದುರಂತಕ್ಕೆ ಮುನ್ನವೇ ತಗೆದುಕೊಳ್ಳಬಲ್ಲರು; ಬದುಕಿನ ಜೊತೆ ಸೆಣಸಾಡಬಲ್ಲರು. ಸ್ಟೆಲ್ಲಾ, ಸುಭದ್ರ, ದೇವಿ, ಗೌರಿ, ನಿರ್ಮಲಾ, ಪಾರ್ವತಜ್ಜಿ ಮುಂತಾದ ಪಾತ್ರಗಳು ಬದುಕಿನ ಸವಾಲುಗಳನ್ನು ಎದುರಿಸಬಲ್ಲರು. ಲೈಂಗಿಕತೆ ಎಂಬುದು ಹೆಣ್ಣು ಬದುಕಿನ ಪ್ರಮುಖ ಕೇಂದ್ರವಾಗಿಯೇ ಬರುತ್ತದೆ. ಹೆಣ್ಣಿನ ಅಂತರಂಗದ ಕಂಪನಗಳು ಲಂಕೇಶರ ಕಥಾಲೋಕದಲ್ಲಿ ವಿಶಿಷ್ಟವಾಗಿ ಕಾಣಿಸಿಕೊಂಡಿವೆ.

ತೇಜಸ್ವಿಯವರು ಎಪ್ಪತ್ತರ ದಶಕದಲ್ಲಿ ನವ್ಯವು ನಿಸ್ತೇಜಗೊಂಡಿದೆ ಎಂದು ಹೇಳಿದರೂ, ಅದಾಗಲೇ ಲಂಕೇಶ್, ಅನಂತಮೂರ್ತಿ, ಆಲನಹಳ್ಳಿ ಕೃಷ್ಣ ಮುಂತಾದವರು ತಮ್ಮ ಕಥನಕ್ರಮವನ್ನು ಬದಲಿಸಿಕೊಂಡಿದ್ದರು. ಲಂಕೇಶರನ್ನು ಒಳಗೊಂಡಂತೆ ಕನ್ನಡ ಕಥಾಪರಂಪರೆಯ (ಅದುವರೆಗಿನ ನವೋದಯ, ಪ್ರಗತಿಶೀಲ ಕಥನಗಳ) ಗಟ್ಟಿ ಲಕ್ಷಣಗಳನ್ನು ಸಮರ್ಥವಾಗಿ ಸೋಸಿಕೊಂಡು,